# ನಿರ್ದೇಶನದತ್ತ ಅಜಯ್ ರಾವ್



ಇದೇ ಏಪ್ರಿಲ್ ತಿಂಗಳಿನಲ್ಲಿ ಬಿಡುಗಡೆಯಾದ 'ಯುದ್ಧಕಾಂಡ 2' ಸಿನಿಮಾ ಮೂಲಕ ನಿರ್ಮಾಣದಲ್ಲಿಯೂ ಕೈಯಾಡಿಸಿದ ನಟ ಅಜಯ್ ರಾವ್, ನಿರ್ದೇಶನದಲ್ಲೂ ತಮ್ಮ ಅದೃಷ್ಟ ಪರೀಕ್ಷೆಗೆ ಮುಂದಾಗಿದ್ದಾರೆ.

ಅಜಯ್ ರಾವ್, ಅರ್ಚನಾ ಜೋಯಿಸ್ ಅಭಿನಯದ 'ಯುದ್ಧಕಾಂಡ 2' ಸಿನಿಮಾ ಈಚೆಗೆ ಬಿಡುಗಡೆಗೊಂಡಿದ್ದು, ಜನರಿಂದ ಉತ್ತಮ ಪ್ರತಿಕ್ರಿಯೆ ಗಳಿಸಿಕೊಂಡಿತ್ತು. ಈ ಸಿನಿಮಾ ನಟ, ನಿರ್ಮಾಪಕ ಎರಡೂ ಅಜಯ್ ರಾವ್ ಆಗಿದ್ದರು. ಇದೀಗ ಅವರ ವೃತ್ತಿಬದುಕಿನಲ್ಲಿ ಮತ್ತೊಂದು ಹೊಸ ಪುಟ ತೆರೆಯಲು ಅಣಿಯಾಗಿದ್ದಾರೆ.

'ನಿರ್ದೇಶನ ನನ್ನ ಮುಂದಿನ ದಾರಿ. ಈಗಾಗಲೇ ಸ್ಕ್ರಿಪ್ಟ್ ಕೆಲಸದಲ್ಲಿ ತೊಡಗಿಕೊಂಡಿದ್ದೇನೆ. ಬೇರೆ ಪ್ರಾಜೆಕ್ಟ್‌ಗಳ ನಡುನಡುವೆಯೇ ಈ ಕೆಲಸವೂ ಸಾಗಿದೆ. ಮುಂದಿನ ಸಿನಿಮಾ ನನ್ನ ನಿರ್ದೇಶನದ ಮೊದಲ ಹೆಜ್ಜೆಯಾಗಿರಲಿದೆ. ನಟನೆಯಲ್ಲೂ ತೊಡಗಿಕೊಂಡಿದ್ದೇನೆ' ಎಂದಿದ್ದಾರೆ.

'ನಿರ್ಮಾಣ, ನಿರ್ದೇಶನ, ನಟನೆ ಎಲ್ಲವೂ ಏಕಕಾಲಕ್ಕೆ ಕಷ್ಟ. ಸದ್ಯಕ್ಕೆ ನಿರ್ದೇಶನದ ಮೇಲೆ ಒತ್ತು ನೀಡಿದ್ದೇನೆ. ಅಲ್ಲಿಯೇ ನನ್ನ ಗಮನಹರಿಸುತ್ತಿದ್ದೇನೆ. ನಿರ್ದೇಶನದತ್ತ ಆಗಿನಿಂದಲೂ ಒಂದು ಪ್ಯಾಷನ್ ಇತ್ತು. ಆದರೆ ಗಟ್ಟಿ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗಿರಲಿಲ್ಲ. ಈಗ ಅದಕ್ಕೆ ಸಮಯ ಬಂದಿದೆ' ಎಂದು ಉತ್ತರಿಸಿದ್ದಾರೆ.



# ಮೇಘನಾ ಹೊಸ ಹಾದಿ

ಈಚೆಗೆ ಡಾಕ್ಟರೇಟ್ ಪದವಿ ಪಡೆದಿರುವ ನಟಿ ಮೇಘನಾ ಗಾಂವ್ಕರ್, ಹೊಸ ಸಿನಿಮಾವೊಂದಕ್ಕೆ ತಯಾರಾಗುತ್ತಿದ್ದಾರೆ. 'ಜಡ್ಜ್‌ಮೆಂಟ್' ಸಿನಿಮಾ ನಂತರ ಈ ಚಿತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದು, ಜಾಗತಿಕ ಮಟ್ಟದಲ್ಲಿ ಸಿನಿಮಾ ರೂಪಿಸುವುದಾಗಿ ನಿರ್ದೇಶಕರು ಹೇಳಿದ್ದಾರೆ.

'ಜಡ್ಜ್‌ಮೆಂಟ್' ಸಿನಿಮಾ ನಿರ್ದೇಶಕ ಗುರುರಾಜ್ ಕುಲಕರ್ಣಿ ಅವರು ಮತ್ತೊಂದು ಸಿನಿಮಾವನ್ನು ರೂಪಿಸುತ್ತಿದ್ದು, ಇದರಲ್ಲೂ ಮೇಘನಾ ಗಾಂವ್ಕರ್ ಅವರೇ ನಟಿಯಾಗಿರುವುದಾಗಿ ಮಾಹಿತಿ ನೀಡಿದ್ದಾರೆ.

'ಅಮೃತಾ ಅಪಾರ್ಟ್‌ಮೆಂಟ್' ಸಿನಿಮಾ ಖ್ಯಾತಿಯ ನಿರ್ದೇಶಕ ಗುರುರಾಜ್ ಕುಲಕರ್ಣಿ, ಈಚೆಗೆ 'ಜಡ್ಜ್‌ಮೆಂಟ್' ನಿರ್ದೇಶಿಸಿದ್ದರು. ಇದರ ನಂತರದ ಈ ಪ್ರಾಜೆಕ್ಟ್ ಅನ್ನು ಜಾಗತಿಕ ಮಟ್ಟದಲ್ಲಿ ಮಾಡುತ್ತಿರುವುದಾಗಿ ಹೇಳಿದ್ದಾರೆ.

ಸಿನಿಮಾಗೆ ಮೇಘನಾ ಅವರನ್ನು ನಟಿಯಾಗಿ ಆಯ್ಕೆ ಮಾಡಿರುವ ಕುರಿತು ವಿವರಣೆ ನೀಡಿರುವ ಅವರು, 'ಈ ಪಾತ್ರಕ್ಕೆ ಮೇಘನಾ ಅವರು ಬಹಳ ಚೆನ್ನಾಗಿ ಒಪ್ಪುತ್ತಾರೆ ಎಂದು ಅನಿಸಿತು. ಅವರು ಒಳ್ಳೆಯ ಪರ್ಫಾರ್ಮರ್ ಮಾತ್ರವಲ್ಲ, ಯಾವುದೇ ಸಿನಿಮಾದ ಇಡೀ ಪಯಣದಲ್ಲಿ ಸಿನಿಮಾ ಪರ ನಿಲ್ಲುವವರು. ಜಾಗತಿಕ ಪ್ರೇಕ್ಷಕರನ್ನು ಗಮನದಲ್ಲಿಟ್ಟುಕೊಂಡು ಸಿನಿಮಾ ರೂಪಿಸಲಾಗುತ್ತಿದೆ' ಎಂದು ಮಾಹಿತಿ ನೀಡಿದ್ದಾರೆ. ಜೂನ್ ತಿಂಗಳಿನಲ್ಲಿ ಪ್ರೊಡಕ್ಷನ್ ಕೆಲಸಗಳು ಆರಂಭವಾಗಲಿದ್ದು, ಸಿನಿಮಾ ತಯಾರಿ ಲಗುಬಗೆಯಿಂದ ಸಾಗಿದೆ.